# ಅಂತರರಾಷ್ಟ್ರೀಯ ಮಟ್ಟದ ತರಬೇತಿ ಪಡೆದ ವಿಡಿಐಟಿ ಪ್ರಾಧ್ಯಾಪಕರು

ನುಡಿಜೇನು ವರದಿ

**ಹಳಿಯಾಳ:** ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ಬೆಳಗಾವಿಯ ಉಪಕುಲಪತಿಗಳಾದ ಡಾ. ವಿದ್ಯಾಶಂಕರ್ ಅವರು ಕೆ.ಎಲ್.ಎಸ್.ವಿ.ಡಿ.ಐ.ಟಿ ಹಳಿಯಾಳದ ಮೆಕ್ಯಾನಿಕಲ್ ವಿಭಾಗದ 5 ಪ್ರಾಧ್ಯಾಪಕರಿಗೆ ಪ್ರಮಾಣ ಪತ್ರ ನೀಡಿ ಏಪ್ರಿಲ್ 10 ರಂದು ಪುರಸ್ಕರಿಸಿದರು. ಮಹಿಜೊ ಇಂಡಿ–ಯಾ ಜಪಾನ್ ಅಧ್ಯಯನ ಕೇಂದ್ರ ಮತ್ತು ಐ ಐ ಎಂ ಬೆಂಗಳೂರು ಜಂಟಿ ಯಾಗಿ ನಡೆಸಿದ "ಏಜಿನರಿ ಲರ್ನಿಂಗ್ ಕಮ್ಯುನಿಟಿ ಆಫ್ ಇಂಡಿಂ–ಯಾ" ತರಬೇತಿಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ ಪ್ರಾಧ್ಯಾಪಕರುಗಳಿಗೆ ಸನ್ಮಾನ ಸಮಾರಂಭವನ್ನು ವಿ ತಾ ವಿ ಬೆಳಗಾವಿಯಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಅತಿಥಿಗಳಾಗಿದ್ದ ಡಾ. ವಿದ್ಯಾಶಂಕರ್ ಅವರು ಪ್ರಾಧ್ಯಾಪಕರು ವಿ ಎಲ್ ಸಿ ಐ ನಲ್ಲಿ ಪಡೆದುಕೊಂಡಿರುವ ತರಬೇತಿಯಿಂದ ವಿಕಸಿತ ಭಾರತ ನಿರ್ಮಾಣಕ್ಕೆ ಸಹಕಾರಿಯಾಗಬೇಕೆಂದು ಹೇಳಿದರು. ಮಹಿಜೋ ಇಂಡಿಂ–ಯಾ ಜಪಾನ್ ಅಧ್ಯನ ಕೇಂದ್ರದ ಈ ಕಾರ್ಯಕ್ರಮವನ್ನು ಮುಕ್ತ ಕಂಠದಿಂದ ಶ್ಲಾಘಿಸಿದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ವಿಎಲ್‌ಸಿಐ ಕಾರ್ಯಕ್ರಮದ ಮುಖ್ಯಸ್ಥರಾದ ಸಾಯಿದೀಪ್ ರತ್ನಂ ಈ ಕಾರ್ಯಕ್ರಮದ ಮುಖ್ಯ ಉದ್ದೇಶ ಹಾಗೂ ಕೈಗಾರಿಕಾ ಕ್ಷೇತ್ರದಲ್ಲಿ ಈ ತರಬೇತಿಯು ಹೇಗೆ ಉಪಯುಕ್ತವಾಗುವುದು ಎಂದು ವಿವರಿಸಿದರು.

ಡಾ.ಕೆ. ಎಸ್. ಪೂಜಾರ್, ಡಾ. ಶಂಕರ್ ಬಡಿಗೇರ್, ಡಾ. ಗುರುರಾಜ್ ಹತ್ತಿ, ಪ್ರೊ. ಸಂತೋಷ್ ಸವಣೂರ್, ಪ್ರೊ. ಗುರುನಾಥ ಮೇವುಂಡಿ ಇವರುಗಳು ವಿ ಎಲ್ ಸಿ ಐ ತರಬೇತಿಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ್ದಾರೆ. ಅಂತರರಾಷ್ಟ್ರೀಯ ಮಟ್ಟದ ತರಬೇತಿ ಕಾರ್ಯಕ್ರಮದಲ್ಲಿ ಉತ್ತಮ ಸಾಧನೆ ತೋರಿರುವ ಮಹಾವಿದ್ಯಾಲಯದ ಪ್ರಾಧ್ಯಾಪಕರನ್ನು ಆಡಳಿತ ಮಂಡಳಿಯ ಅಧ್ಯಕ್ಷರಾದ ಶ್ರೀ. ವಿನಾಯಕ್ ಲೋಕುರ್ ಅಭಿನಂದಿಸಿದ್ದಾರೆ.

ಕೈಗಾರಿಕಾ ಕ್ಷೇತ್ರದಲ್ಲಿ ಉಪಯುಕ್ತ ವಾಗುವ ಅಂತರಾಷ್ಟ್ರೀಯ ಮಟ್ಟದ ತರಬೇತಿ ಕಾರ್ಯಕ್ರಮದಲ್ಲಿ ಪ್ರಾಧ್ಯಾಪಕರು ಪಾಲ್ಗೊಂಡು ಯಶಸ್ವಿಯಾಗಿ ತರಬೇತಿಯನ್ನು ಸಂಪೂರ್ಣಗೊಳಿಸಿರುವುದು ಸಂತಸ ತಂದಿದೆ ಎಂದು ಪ್ರಾಚಾರ್ಯರಾದ ಡಾ. ವಿ. ಎ. ಕುಲಕರ್ಣಿ ಹೇಳಿದ್ದಾರೆ . ಮೆಕ್ಯಾನಿಕಲ್ ವಿಭಾಗದ ಮುಖ್ಯಸ್ಥರಾದ ಡಾ. ಮುರುಗಯ್ಯ ಎಸ್ ಬಿ , ಡಿನ್ ಪ್ರೊ ಎಸ್ ಡಿ ಕುಲಕರ್ಣಿ ಮತ್ತು ಮಹಾವಿದ್ಯಾಲಯದ ಎಲ್ಲಾ ಸಿಬ್ಬಂದಿಗಳು ಅಭಿನಂದಿಸಿದ್ದಾರೆ.